| ನೋಂದಣಿ ಸಂಖ್ಯೆ Registration No: | | | | | | | | | | | |
|---|---|---|---|---|---|---|---|---|---|---|---|

**A2 – 2024**

ವಿಷಯ ಸಂಕೇತ Subject Code **01**

# ಕನ್ನಡ / KANNADA

ಸಮಯ: 3 ಗಂಟೆ 15 ನಿಮಿಷಗಳು (ಒಟ್ಟು ಪ್ರಶ್ನೆಗಳ ಸಂಖ್ಯೆ : 56) ಗರಿಷ್ಠ ಅಂಕಗಳು: 80

Time : 3 Hours 15 Minutes] [Total No. of Questions : 56] [Max. Marks : 80

**ಸೂಚನೆ :**

I. ಅ–ವಿಭಾಗದಲ್ಲಿನ ಪ್ರಶ್ನೆಗಳಿಗೆ ಪ್ರಥಮವಾಗಿ ಬರೆದ ಉತ್ತರಗಳನ್ನು ಮಾತ್ರ ಮೌಲ್ಯಮಾಪನದಲ್ಲಿ ಪರಿಗಣಿಸಲಾಗುವುದು.

## ಅ–ವಿಭಾಗ

I. (ಅ) ಈ ಕೆಳಗಿನ ಪ್ರಶ್ನೆಗಳಿಗೆ ನೀಡಿರುವ ಉತ್ತರಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ: **(10 × 1 = 10)**

1) ರಾವಣನಿಗೆ ಯಾರ ಬಗ್ಗೆ ವೈರಾಗ್ಯ ಮೂಡಿತು?

(a) ಸೀತೆಯ ಬಗ್ಗೆ (b) ರಾಮನ ಬಗ್ಗೆ

(c) ಲಕ್ಷ್ಮಣನ ಬಗ್ಗೆ (d) ವಿಭೀಷಣನ ಬಗ್ಗೆ

2) ಯಾರ ಕೈಯಲ್ಲಿ ಚಂದ್ರಾಯುಧವಿದ್ದು ಫಲವಿಲ್ಲ?

(a) ಅಂಧಕನ ಕೈಯಲ್ಲಿ (b) ಹಂದೆಯ ಕೈಯಲ್ಲಿ

(c) ಮರ್ಕಟನ ಕೈಯಲ್ಲಿ (d) ಶರಣರ ಕೈಯಲ್ಲಿ

3) ಬಸುರ ಬಗೆವೆನು ಕೀಚಕನ ನಸು
ಮಿಸುಕಿದೊಡೆ ವೈರಾಟ ವಂಶದ
ಹೆಸರ ತೊಡೆವೆನು ನಮ್ಮನರಿದೊಡೆ ಕೌರವ ವ್ರಜವ
ಕುಸುರಿದರಿವೆನು ___ ಇಲ್ಲಿ ನಮ್ಮನು ಎಂದರೆ ಯಾರು?

(a) ಕೌರವರು (b) ಯಾದವರು

(c) ಪಾಂಡವರು (d) ದೇವತೆಗಳು

4) ಎಂತಹ ನೆರೆಯವರು ಇರಬೇಕು?

(a) ಕಳ್ಳರ ನೆರೆ (b) ಸುಳ್ಳುಗಾರರ ನೆರೆ

(c) ಬುದ್ಧಿವಂತರ ನೆರೆ (d) ಮಂದಮತಿಗಳ ನೆರೆ

5) ಯಾವ ಮರದ ರಸವು ವಿಷವಾಗಿರುತ್ತದೆ?

(a) ಆಲದಮರದ ರಸ
(b) ಮಾವಿನ ಮರದ ರಸ
(c) ಹೊಂಗೆ ಮರದ ರಸ
(d) ಜಾಲಿಯ ಮರದ ರಸ

6) ಹಾಡುವ ಹಕ್ಕಿಯ ಹೆಸರೇನು?

(a) ಕೊಂಬುಕೊಕ್ಕಿನ ಹಕ್ಕಿ
(b) ವಿಷಲಿಂಗ್ ಥ್ರಷ್
(c) ನವಿಲು
(d) ಗಿಳಿ

7) ತಮಗೆ ಸಿಕ್ಕಿದ ಬೆಳ್ಳಿಲೋಟವನ್ನು ಚಿನ್ನಮ್ಮ ಮತ್ತೆ ಹೊಳೆಯ ಮಡುವಿಗೆ ಎಸೆದು, ಹೊಳೆಯ ನೀರಲ್ಲೊಮ್ಮೆ ಸಂಪೂರ್ಣವಾಗಿ ಮುಳುಗಿ ಎದ್ದು ನಿಂತಳು – ಈ ಸಾಲುಗಳಲ್ಲಿ ವ್ಯಕ್ತವಾಗಿರುವ ಅಂಶವನ್ನು ಗುರುತಿಸಿ.

(a) ಅಪವಾದದಿಂದ ಮುಕ್ತಳಾದ ಭಾವ
(b) ಬೇಸಿಗೆಯ ತಾಪವನ್ನು ತಾಳಲಾರದೆ
(c) ಸ್ನಾನ ಮಾಡಲೆಂದು
(d) ಮಡುವಿನ ಆಳ ನೋಡಲು

8) ಆನೆ ಶಾಸ್ತ್ರದವನು ಏನೆಂದು ಭವಿಷ್ಯ ನುಡಿದಿದ್ದನು?

(a) ಐದು ಜನ ಸಾಯುತ್ತಾರೆ
(b) ಆರು ಜನ ಸಾಯುತ್ತಾರೆ
(c) ಏಳು ಜನ ಸಾಯುತ್ತಾರೆ
(d) ಎಂಟು ಜನ ಸಾಯುತ್ತಾರೆ

9) ಶಿವೇಗೌಡರು ರಾತ್ರೋ ರಾತ್ರಿ ಆನೆಯನ್ನು ಕರೆದುಕೊಂಡು ಹೋದುದೇಕೆ?

(a) ಆನೆಯನ್ನು ಕೊಲ್ಲಲು
(b) ಕಳ್ಳನಾಟ ಇಳಿಸಲು
(c) ಆನೆಯನ್ನು ಮಾರಲು
(d) ಆನೆಯನ್ನು ಕಾಡಿಗೆ ಓಡಿಸಲು

10) ಆನೆ ಅಷ್ಟು ದೊಡ್ಡ ಪ್ರಾಣಿಯಾದರೂ ಸುಳಿವೇ ಕೊಡದೆ ತಂಗಾಳಿಯಂತೆ ಓಡಾಡಬಲ್ಲದು ಎನ್ನುವುದು ನಾಗರಾಜನ ಸರ್ವಿಸ್ಸಿನಲ್ಲಿ ಎಷ್ಟೋ ಸಾರಿ ಗಮನಕ್ಕೆ ಬಂದಿತ್ತು. ಅದಕ್ಕೆ ಅವನು 'ಮೈಯೆಲ್ಲಾ ಕಣ್ಣಾಗಿ' ಕುಳಿತಿದ್ದ – ಇಲ್ಲಿ 'ಮೈಯೆಲ್ಲಾ ಕಣ್ಣಾಗಿ' ಕುಳಿತಿದ್ದ ಎನ್ನುವುದು ಏನನ್ನು ಸೂಚಿಸುತ್ತದೆ?

(a) ವಿಶ್ರಾಂತಿಗಾಗಿ ಕೂರುವುದು
(b) ಮೈಮರೆತು ಕೂರುವುದು
(c) ಉದಾಸೀನದಿಂದ ಕೂರುವುದು
(d) ಪೂರ್ಣ ಎಚ್ಚರದಿಂದ ಗಮನಿಸುವುದು

**(ಆ)** ಬಿಟ್ಟ ಸ್ಥಳಗಳಿಗೆ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ: **(5 × 1 = 5)**

(ರಾಮಾಶ್ವಮೇಧ, ವಿಂಗ್ಸ್ ಆಫ್ ಫೈರ್, ಅದೃಷ್ಟದ ಸಿನಿಮಾ, ಮಹಾಭಾರತ, ತಬ್ಬಲಿ)

11) ಸೀತಾಳಿಗೆ ಬದುಕು .................. ಆಟದಂತೆ ಕಾಣುತ್ತಿತ್ತು.

12) ಅಬ್ದುಲ್ ಕಲಾಂ ಅವರು ಬರೆದ ಆತ್ಮ ಕಥೆ................

13) ಮನೋರಮೆಯು ಮುದ್ದಣನಿಂದ ಕೇಳಲು ಬಯಸಿದ ಕಥೆ .............

14) ಹಳ್ಳಿಯ ಹೋಟೇಲುಗಳಲ್ಲಿ ಈಗ ............. ದೇವತೆಗಳ ದರ್ಶನವೂ ಆಗುತ್ತದೆ.

15) ಕನ್ನಡಿಗರು ತಮ್ಮ ರಾಜ್ಯದಲ್ಲಿ ತಾವೇ ................ ಗಳಾಗುತ್ತಿದ್ದಾರೆ.

**(ಇ)** ಹೊಂದಿಸಿ ಬರೆಯಿರಿ: **(5 × 1 = 5)**

| | |
|---|---|
| 16) ಬೆಳಗು ಜಾವ | ಅ) ರಾಷ್ಟ್ರಕವಿ |
| 17) ಜಿ.ಎಸ್. ಶಿವರುದ್ರಪ್ಪ | ಆ) ಜನಗಳಿಗೆ ನೀರಿಲ್ಲ |
| 18) ಕೆ.ಎಸ್. ನಿಸಾರ್ ಅಹಮದ್ | ಇ) ಚಿಟ್ಟೆ ಮತ್ತು ಜೀವಯಾನ |
| 19) ಟಿ. ಯಲ್ಲಪ್ಪ | ಈ) ಜೋಗದ ಜೋಕು ಕವನದ ಕವಿ |
| 20) ದನಗಳಿಗೆ ಮೇವಿಲ್ಲ | ಉ) ಕನ್ನಡದ ಸಾನೆಟ್ ಪ್ರಕಾರ |
| | ಊ) ನಿತ್ಯೋತ್ಸವ ಕವಿ |

## ಆ–ವಿಭಾಗ

II. **(ಅ)** ಯಾವುದಾದರೂ **ಮೂರು** ಪ್ರಶ್ನೆಗಳಿಗೆ **ಎರಡು ಮೂರು** ವಾಕ್ಯಗಳಲ್ಲಿ ಉತ್ತರಿಸಿರಿ: **(3 × 2 = 6)**

21) ರಾವಣ ತನ್ನ ಅಂತಃಪುರದ ಸ್ತ್ರೀಯರನ್ನು ಹೇಗೆ ಸಂತೋಷಿಸಿದನು?

22) ಬಡತನ ಹೇಗೆ ಬಯಲಾಯಿತು?

23) ಹುಸಿನಿದ್ದೆ ಸಾಕು ಎದ್ದೇಳಿ ಎಂದು ಕವಿ ಮಕ್ಕಳಿಗೆ ಹೇಳಲು ಕಾರಣವೇನು?

24) ಶಿಲುಬೆಗೇರಿದ ಯೇಸುವಿನ ದೇಹ ಯಾರಿಗೆ ಏನನ್ನು ಅನ್ನುವಂತಿದೆ?

(ಆ) ಯಾವುದಾದರೂ **ಎರಡು** ಪ್ರಶ್ನೆಗಳಿಗೆ **ಎರಡು–ಮೂರು** ವಾಕ್ಯಗಳಲ್ಲಿ ಉತ್ತರಿಸಿರಿ: **(2 × 2 = 4)**

25) ಬಸಲಿಂಗನಿಗೆ ಅದು ಪುರುಸೊತ್ತಿಲ್ಲದ ಕಾಲ ಏಕೆ?

26) ಕೈಗಾರಿಕೋದ್ಯಮಿಗಳಿಂದ ಕಾಡು ನಾಶವಾದುದು ಹೇಗೆ?

27) ಸಂಸ್ಕೃತ–ಕನ್ನಡಗಳು ಸೇರಿದರೆ ಹೇಗೆ ಸೊಗಯಿಸುತ್ತದೆ?

28) ಗಿಡ್ಡ ಮಾಸ್ತರರು ಶಾಲೆಯಲ್ಲಿ ಹುಡುಗರಿಗೆ ಏಕೆ ಹೊಡೆಯುತ್ತಾರೆ?

(ಇ) ಯಾವುದಾದರೂ **ಮೂರು** ಪ್ರಶ್ನೆಗಳಿಗೆ **ಎರಡು–ಮೂರು** ವಾಕ್ಯಗಳಲ್ಲಿ ಉತ್ತರಿಸಿರಿ: **(3 × 2 = 6)**

29) ಮಠದವರಿಗೆ ಆನೆಗಿಂತ ವೇಲಾಯುಧನನ್ನು ಸಾಕಲು ತ್ರಾಸವಾದುದೇಕೆ?

30) ನಾಯಿಯನ್ನು ಕೊಲ್ಲದೆ ನೌಕರರು ಸುಳ್ಳು ಹೇಳಿರುವರೆಂದು ನಿರೂಪಕರು ಯಾವ ಸಲಹೆ ನೀಡಿದರು?

31) ಜಬ್ಬಾರ್ ನಿರೂಪಕರಿಗೆ ಅಂಚೆ ವಿಲೇವಾರಿ ಬಗ್ಗೆ ಅಸಡ್ಡೆಯಿಂದ ಏನು ಹೇಳಿದ?

32) ಕಾಡಾನೆಗಳ ಹಾವಳಿಗೆ ಕೃಷ್ಣೇ ಗೌಡರ ಆನೆ ಕಾರಣವಲ್ಲ ಎನ್ನುವ ಪ್ರಕಾಶರ ಹೇಳಿಕೆಯನ್ನು ಸಮರ್ಥಿಸಿ?

## ಇ–ವಿಭಾಗ

III. (ಅ) ಯಾವುದಾದರೂ **ಎರಡು** ವಾಕ್ಯಗಳ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ: **(2 × 3 = 6)**

33) ನೀನಲ್ಲದುಳಿದವರುಚಿತ ಬಾಹಿರರು.

34) ರಸ್ತೆ ದಾಟುವಾಗೆಚ್ಚರಿಕೆ.

35) ಎಷ್ಟುಸಲವಮ್ಮ ಹೇಳುವುದು ನಿನಗೆ.

(ಆ) ಯಾವುದಾದರೂ **ಒಂದು** ವಾಕ್ಯದ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ: **(1 × 3 = 3)**

36) ಹಿಂದಿ–ಇಂಗ್ಲೀಷ್ ಬಾರದವರು ವಿಮಾನ ಪ್ರಯಾಣ ಮಾಡಬಾರದೆ?

37) ಜ್ಞಾನದ ಅಡಿಪಾಯವೇ ಪ್ರಶ್ನೆ ಕೇಳುವುದು.

(ಇ) ಯಾವುದಾದರೂ **ಒಂದು** ವಾಕ್ಯದ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ: (1 × 3 = 3)

38) ಆನೆ ಸಾಕುವುದೆಂದರೆ ಎಲೆಕ್ಷನ್‌ಗೆ ನಿಂತಹಾಗೆ.

39) ಕೋವಿ ಸಿಕ್ಕಿದೆ ಆದರೆ ಹೆಣ ಸಿಗಲಿಲ್ಲ .

## ಈ–ವಿಭಾಗ

IV. (ಅ) ಯಾವುದಾದರೂ **ಎರಡು** ಪ್ರಶ್ನೆಗಳಿಗೆ **ಐದಾರು** ವಾಕ್ಯಗಳಲ್ಲಿ ಉತ್ತರಿಸಿ : (2 × 4 = 8)

40) ಪ್ರಮದ ವನದಲ್ಲಿ ರಾವಣ–ಸೀತೆಯರ ನಡುವೆ ನಡೆದ ಸಂಭಾಷಣೆಯನ್ನು ವಿವರಿಸಿ?

41) ಬಸವಣ್ಣನವರ ಪ್ರಕಾರ ನೈಜಭಕ್ತಿಯ ಲಕ್ಷಣಗಳಾವುವು?

42) ತನಗೊದಗಿದ ಸಂಕಟವನ್ನು ಹೇಳಿಕೊಳ್ಳುವ ದ್ರೌಪದಿಯ ಸ್ವಗತದ ನುಡಿಗಳಾವುವು?

43) ಜ್ಞಾನವನ್ನು ಹೊಂದುವ ಮಾರ್ಗ ಯಾವುದೆಂಬುದನ್ನು ಕವಿ ಹೇಗೆ ವಿವರಿಸಿದ್ದಾನೆ?

(ಆ) ಯಾವುದಾದರೂ **ಒಂದು** ಪ್ರಶ್ನೆಗೆ **ಐದಾರು** ವಾಕ್ಯಗಳಲ್ಲಿ ಉತ್ತರಿಸಿ: (1 × 4 = 4)

44) ಬಸಲಿಂಗನಿಗೆ ಸಿಟ್ಟುಬರಲು ಕಾರಣವೇನು? ಅದನ್ನು ಆತ ಯಾವ ರೀತಿಯಲ್ಲಿ ವ್ಯಕ್ತಪಡಿಸುತ್ತಾನೆ?

45) ರಜೆಗೆಂದು ಮೈಸೂರಿಗೆ ಹೋದಾಗ ಲೇಖಕಿಯ ಪತಿಗಾದ ತೊಂದರೆಯೇನು?

46) ಚಿನ್ನಮ್ಮನ ಕುಟುಂಬ ಹೊಳೆಯ ಬಗ್ಗೆ ಅಸಹನೆ ಹೊಂದಬಾರದೆಂದು ಲೇಖಕಿ ಬಯಸುವುದೇಕೆ?

(ಇ) ಯಾವುದಾದರೂ **ಒಂದು** ಪ್ರಶ್ನೆಗೆ **ಐದಾರು** ವಾಕ್ಯಗಳಲ್ಲಿ ಉತ್ತರಿಸಿ: (1 × 4 = 4)

47) ಡ್ರೈವರ್ ಸಾವಿನ ಸುದ್ದಿಯನ್ನು ಶಿವೇಗೌಡ ಮತ್ತಿತರರು ಹೇಗೆ ಮುಚ್ಚಿಹಾಕಿದರು?

48) ಪೋಸ್ಟ್‌ಮೆನ್ ಜಬ್ಬಾರನ ಬವಣೆಗಳನ್ನು ನಿರೂಪಕರು ಹೇಗೆ ವಿವರಿಸಿದ್ದಾರೆ?

## ಭಾಷಾಭ್ಯಾಸ

V. (ಅ) ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ನಾಲ್ಕಕ್ಕೆ** ಸೂಚನೆಗೆ ಅನುಗುಣವಾಗಿ ಉತ್ತರಿಸಿ: **(4 × 2 = 8)**

49) ಕೆಳಗಿನ ಎರಡು ಪದಗಳಿಗೆ ನಾನಾರ್ಥಗಳನ್ನು ಬರೆಯಿರಿ:

ಸೂಳ್, ನೆನೆ, ಹದ್ದು

50) ಕೆಳಗಿನ ಎರಡು ಶಬ್ದಗಳಿಗೆ ತದ್ಭವ ರೂಪ ಬರೆಯಿರಿ:

ಭಿಕ್ಷಾ, ಯಶ, ಪರೀಕ್ಷಿಸು

51) ಕೆಳಗಿನ ಎರಡು ನುಡಿಗಟ್ಟುಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ.

ಅಜ್ಜನ ಕಾಲದ್ದು, ಸಿಂಹಸ್ವಪ್ನ, ಒಣಜಂಬ

52) ಕೆಳಗಿನ ಎರಡು ಶಬ್ದಗಳ ಗುಣವಾಚಕಗಳನ್ನು ಬರೆಯಿರಿ:

ಶ್ರೇಷ್ಠ ವಿಜ್ಞಾನಿ, ಪರದೇಶಿ, ದಯಾಮೃತ್ಯು

53) ಕೆಳಗಿನ ಎರಡು ಶಬ್ದಗಳ ವಿಭಕ್ತಿ ಪ್ರತ್ಯಯವನ್ನು ಹೆಸರಿಸಿ.

ಕುದುಪನನ್ನು, ಹರೆಯಕ್ಕೆ, ಧರೆಯೊಳ್

54) ಕೆಳಗಿನ ಎರಡು ಕ್ರಿಯಾಪದಗಳ ಕಾಲ ಸೂಚಕವನ್ನು ಬರೆಯಿರಿ.

ಹೋಗುವರು, ನೋಡುತ್ತಾಳೆ, ಹೇಳಿದರು

(ಆ) ಯಾವುದಾದರೂ **ಒಂದನ್ನು** ಕುರಿತು ಪ್ರಬಂಧ ಬರೆಯಿರಿ: **(1 × 4 = 4)**

55) ಹೆಣ್ಣು ಭ್ರೂಣಹತ್ಯೆಯಿಂದ ಎದುರಾಗುವ ಸಮಸ್ಯೆಗಳು

**ಅಥವಾ**

ಭ್ರಷ್ಟಾಚಾರ ನಿರ್ಮೂಲನೆಯಲ್ಲಿ ಯುವ ಜನರ ಪಾತ್ರ.

(ಇ) ಯಾವುದಾದರೂ **ಒಂದನ್ನು** ಕುರಿತು ಪತ್ರ ಬರೆಯಿರಿ: **(1 × 4 = 4)**

(ಯಾವುದೇ ಪತ್ರದಲ್ಲಿ ಹೆಸರನ್ನು ನಮೂದಿಸಬಾರದು; ಸಂಕೇತಾಕ್ಷರಗಳನ್ನು ಮಾತ್ರ ಬಳಸಬೇಕು. ಉದಾಹರಣೆಗೆ : ಅ.ಬ.ಕ)

56) ನಿಮ್ಮ ಪ್ರದೇಶದ ಬರಗಾಲವನ್ನು ವಿವರಿಸಿ ಬರಪರಿಹಾರ ನೀಡುವಂತೆ ಕೋರಿ ಜಿಲ್ಲಾಧಿಕಾರಿಗಳಿಗೊಂದು ಪತ್ರ ಬರೆಯಿರಿ.

**ಅಥವಾ**

ನಿಮ್ಮ ಪರೀಕ್ಷಾ ಸಿದ್ಧತೆಯನ್ನು ಕುರಿತು ತಂದೆ / ತಾಯಿಗೊಂದು ಪತ್ರ ಬರೆಯಿರಿ.

---